241 (402) ಶ್ರೀ ಪಾಟೀಲ್ ಬಿ.ಆರ್ (ಆಳಂದ) ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಆಳಂದ ಪಟ್ಟಣದ ಒಳಗಡೆ ರಾಜ್ಯ ಹೆದ್ದಾರಿ 32 ಹಾಯ್ದು ಹೋಗುತ್ತಿದ್ದು ವಿಪರೀತ ವಾಹನ ಸಂಚಾರದಿಂದ ಸಂಚಾರಕ್ಕೆ ಹಾಗೂ ಜನರು ಓಡಾಡುವುದಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಆಳಂದ ಪಟ್ಟಣದ ಹೊರವಲಯದಿಂದ ರಾಜ್ಯ ಹೆದ್ದಾರಿ 10 ರಿಂದ ರಾಜ್ಯ ಹೆದ್ದಾರಿ 32 ಕ್ಕೆ ಸಂಪರ್ಕ ಕಲ್ಪಿಸಿ ಬೈಪಾಸ್ ರಸ್ತೆ ಮಾಡುವ ಪ್ರಸ್ತಾವನೆ ಈ ಹಿಂದೆ ಸರ್ಕಾರದ ಮುಂದಿದ್ದದ್ದು ನಿಜವೇ;

ಇ. ಹಾಗಿದ್ದಲ್ಲಿ, ಆ ಪ್ರಸ್ತಾವನೆಯನ್ನು ಪರಿಗಣಿಸಿ ಪ್ರಸಕ್ತ ಆಯವ್ಯಯದಲ್ಲಿ ಸೇರಿಸಿ ಮಂಜೂರು ಮಾಡಲಾಗುವುದೆ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ. ರಸ್ತೆಗಳ ಆಯ್ದ ಭಾಗಗಳು ಹದಗೆಟ್ಟಿರುವುದು ಗಮನಕ್ಕೆ ಬಂದಿದೆ.

ಆ. ತಾಲ್ಲೂಕು ಮಟ್ಟದ ಪಟ್ಟಣಗಳಿಗೆ ಬೈಪಾಸ್ ರಸ್ತೆ ನಿರ್ಮಾಣದ ಪ್ರಸ್ತಾವನೆಗಳು ಸದ್ಯಕ್ಕೆ ಇರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

243 (291) ಶ್ರೀ ಪಾಟೀಲ್ ಬಿ.ಆರ್ (ಗದಗ್) ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಕರ್ನಾಟಕದಲ್ಲಿ ಐ.ಟಿ ಕಂಪನಿಗಳು ಎಷ್ಟು ಹಾಗೂ ಅವುಗಳಲ್ಲಿರುವ ಒಟ್ಟು ಉದ್ಯೋಗಿಗಳು ಎಷ್ಟು (ಕಂಪನಿವಾರು ಗ್ರೇಡ್‌ವಾರು ಮಾಹಿತಿ ನೀಡುವುದು);

ಆ. ಆ ಪೈಕಿ ನಮ್ಮ ರಾಜ್ಯದ ಉದ್ಯೋಗಿಗಳು ಎಷ್ಟು ಹಾಗೂ ಬೇರೆ ಬೇರೆ ರಾಜ್ಯದ ಉದ್ಯೋಗಿಗಳು ಎಷ್ಟು (ಕಂಪನಿವಾರು ರಾಜ್ಯವಾರು ಮಾಹಿತಿ ನೀಡುವುದು);

ಇ. ಈ ಕಂಪನಿಗಳಲ್ಲಿ ಕನ್ನಡಿಗರಿಗೆ ಹೆಚ್ಚೆಚ್ಚು ಅವಕಾಶ ಸಿಗುವ ಹಾಗೆ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು; ಹಾಗೂ ಕೈಗೊಂಡ ಕ್ರಮಗಳೇನು?